ಕರ್ನಾಟಕ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1521**
ಸದಸ್ಯರ ಹೆಸರು	:	**ಶ್ರೀ ಯು.ಬಿ.ವೆಂಕಟೇಶ್.** **(ನಾಮ ನಿರ್ದೇಶನ ಹೊಂದಿದವರು)**
ಉತ್ತರಿಸಬೇಕಾದ ದಿನಾಂಕ	:	**10-03-2022**
ಉತ್ತರಿಸುವ ಸಚಿವರು	:	**ಮಾನ್ಯ ಕಂದಾಯ ಸಚಿವರು**

ಪ್ರಶ್ನೆ	ಉತ್ತರ
(ಅ) ಯುದ್ಧಪೀಡಿತ ಯುಕ್ರೇನ್ ದೇಶದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯದ ವಿದ್ಯಾರ್ಥಿಗಳ ರಕ್ಷಣೆಗೆ ಸರ್ಕಾರ ಮುಂದಾಗಿದೆಯೇ;	ಹೌದು.
(ಆ) ಹಾಗಿದ್ದಲ್ಲಿ ಈ ಸಂಬಂಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;	ರಷ್ಯಾ ದೇಶದ ಸಶಸ್ತ್ರ ದಾಳಿಯ ಪರಿಣಾಮವಾಗಿ, 24 ಫೆಬ್ರುವರಿ 2022 ರಿಂದ ಉಕ್ರೇನ್ ದೇಶವು ಸೈನಿಕ ಕಾನೂನಿಡಿಯಲ್ಲಿ ಸಿಲುಕಿದೆ. ಇದರ ಪರಿಣಾಮವಾಗಿ, ಉಕ್ರೇನ್ ವಾಯುಪ್ರದೇಶವು ಮುಚ್ಚಲ್ಪಟ್ಟಿದ್ದು, ವಿಮಾನಗಳ ವೇಳಾಪಟ್ಟಿಯನ್ನು ರದ್ದುಗೊಳಿಸಲಾಗಿರುತ್ತದೆ. ಇದರಿಂದಾಗಿ ಉಕ್ರೇನ್‌ನಲ್ಲಿ ಸಿಲುಕಿದ ಭಾರತೀಯ ನಾಗರಿಕರನ್ನು ಸ್ಥಳಾಂತರಿಸುವುದು ಕಷ್ಟಕರವಾಗಿದೆ. ಉಕ್ರೇನ್ ದೇಶದ ಕೈವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಮತ್ತು ಭಾರತದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಿಂದ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ಪ್ರಜೆಗಳಿಗೆ ತಕ್ಷಣವೇ ಸಹಾಯ ಮಾಡಲು ಸಹಾಯವಾಣಿಗಳನ್ನು ತೆರೆಯಲಾಗಿದೆ. ಭಾರತದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯ ಮತ್ತು ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ಮತ್ತು ಇತರೆ ಗಡಿ ದೇಶಗಳು ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ಪ್ರಜೆಗಳನ್ನು ಸುರಕ್ಷಿತವಾಗಿ ಮರಳಿ ಕರೆತರಲು ಯುದ್ಧೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಉದ್ದೇಶಕ್ಕಾಗಿ ಭಾರತ ಸರ್ಕಾರವು **'ಆಪರೇಷನ್ ಗಂಗಾ'** ಹೆಸರಿನಲ್ಲಿ ವಿಶೇಷ ಏರ್‌ಲಿಫ್ಟ್ ಕಾರ್ಯಾಚರಣೆಯನ್ನು ಹಮ್ಮಿಕೊಂಡಿದೆ ಮತ್ತು ಭಾರತೀಯರ ಸುರಕ್ಷಿತ ಸ್ಥಳಾಂತರಕ್ಕಾಗಿ ಉಕ್ರೇನ್‌ನ ಗಡಿ ದೇಶಗಳಿಗೆ ಕೇಂದ್ರ ಸರ್ಕಾರದ ಸಚಿವರನ್ನೊಳಗೊಂಡ ಉನ್ನತ ಮಟ್ಟದ ನಿಯೋಗವನ್ನು ಕಳುಹಿಸಲಾಗಿರುತ್ತದೆ. ರಾಜ್ಯ ಸರ್ಕಾರದ ವತಿಯಿಂದ ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (KSDMA), ಕಂದಾಯ ಇಲಾಖೆ, ಬೆಂಗಳೂರು ಇವರನ್ನು ಉಕ್ರೇನ್‌ನಲ್ಲಿ ಸಿಲುಕಿರುವ ಕರ್ನಾಟಕದ ಪ್ರಜೆಗಳ ಸ್ಥಳಾಂತರಕ್ಕಾಗಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮತ್ತು ಕೈವ್‌ನ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಮನ್ವಯ ಕಾರ್ಯ ಸಾಧಿಸಲು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಅಲ್ಲದೆ, ಉಕ್ರೇನ್ ನಲ್ಲಿ ಸಿಲುಕಿರುವವರ ಸಹಾಯಕ್ಕಾಗಿ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ಪ್ರಾಧಿಕಾರದಲ್ಲಿ ಸಹಾಯವಾಣಿಗಳನ್ನು ತೆರೆಯಲಾಗಿದೆ.

	ಯುದ್ಧಪೀಡಿತ ಯುಕ್ರೇನ್ ನಿಂದ ಕರ್ನಾಟಕದ ವಿದ್ಯಾರ್ಥಿಗಳು/ಜನರನ್ನು ಭಾರತಕ್ಕೆ ಕರೆತರಲು ದೆಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳಲ್ಲಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಸದರಿ ಸಹಾಯ ಕೇಂದ್ರಕ್ಕೆ ರಾಜ್ಯದ ಹಿರಿಯ ಅಧಿಕಾರಿಗಳನ್ನು ನೇಮಿಸಲಾಗಿದೆ. ಯುಕ್ರೇನ್ ನಿಂದ ದೇಹಲಿ ಮತ್ತು ಮುಂಬೈ ವಿಮಾನ ನಿಲ್ದಾಣಗಳಿಗೆ ಬಂದಿಳಿಯುವ ಕರ್ನಾಟಕದ ವಿದ್ಯಾರ್ಥಿ/ಜನರನ್ನು ಅವರವರ ಸ್ವ-ಸ್ಥಳಗಳಿಗೆ ಪ್ರಯಾಣಿಸಲು ರಾಜ್ಯ ಸರ್ಕಾರದ ವತಿಯಿಂದಲೇ ಪ್ರಯಾಣ ವೆಚ್ಚವನ್ನು ಭರಿಸಲಾಗುತ್ತಿದೆ.
(ಇ) ಎಷ್ಟು ಜನ ವಿದ್ಯಾರ್ಥಿಗಳು ಯುದ್ಧಪೀಡಿತ ಪ್ರದೇಶದಲ್ಲಿ ಸಿಲುಕಿದ್ದಾರೆನ್ನುವ ಅಂಕಿ-ಅಂಶಗಳನ್ನು ಸರ್ಕಾರ ಸಂಗ್ರಹಿಸಿದೆಯೇ; ಹಾಗೂ ಅವರ ರಕ್ಷಣೆ ಸಂಬಂಧ ಕೇಂದ್ರ ಸರ್ಕಾರದೊಂದಿಗೆ ವ್ಯವಹರಿಸಿದೆಯೇ;	ಹೌದು. ಕರ್ನಾಟಕದ ವಿದ್ಯಾರ್ಥಿಗಳು/ಜನರ ನಿಖರವಾದ ವಿವರಗಳನ್ನು ಒಟ್ಟುಗೂಡಿಸಲು . ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದಿಂದ ಮೊಬೈಲ್/ವೆಬ್ ಅಪ್ಲಿಕೇಶನ್ (Ukraine.karnataka.tech) ಅನ್ನು ಅಭಿವೃದ್ಧಿಪಡಿಸಲಾಗಿದೆ. ಇದರಲ್ಲಿ ಸಂಗ್ರಹಿಸಿದ ವಿವರಗಳನ್ನು ನಿಯಮಿತವಾಗಿ ಭಾರತದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದೊಂದಿಗೆ ಹಂಚಿಕೊಳ್ಳಲಾಗಿದೆ. ಈ ವೆಬ್ ಅಪ್ಲಿಕೇಶನ್ ಮೂಲಕ ಸಾರ್ವಜನಿಕರು, ಪೋಷಕರು ಮೊದಲಾದ ಜನ ಸಮುದಾಯದ ಮೂಲಕ ನೇರವಾಗಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈವರೆಗೆ ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಕರ್ನಾಟಕದ 673 ವಿದ್ಯಾರ್ಥಿಗಳು/ಜನರ ವಿವರಗಳು ಪೋರ್ಟಲ್‌ನಲ್ಲಿ ದಾಖಲಾಗಿರುತ್ತವೆ.
(ಈ) ಈಗಾಗಲೇ ಎಷ್ಟು ಜನ ವಿದ್ಯಾರ್ಥಿಗಳು ಇಲ್ಲಿಗೆ ಸುರಕ್ಷಿತವಾಗಿ ಆಗಮಿಸಿದ್ದಾರೆ, ಎಷ್ಟು ಜನ ಬಾಕಿ ಉಳಿದಿದ್ದಾರೆ; ಬಾಕಿ ಉಳಿದಿರುವ ವಿದ್ಯಾರ್ಥಿಗಳ ರಕ್ಷಣೆಗೆ ಕೈಗೊಂಡಿರುವ ಕ್ರಮಗಳೇನು?	ಯುದ್ಧ ಪ್ರಾರಂಭಕ್ಕೂ ಪೂರ್ವದಲ್ಲಿ ಆಗಮಿಸಿದ 61 ವಿದ್ಯಾರ್ಥಿಗಳು ಹಾಗೂ 'ಆಪರೇಷನ್ ಗಂಗಾ' ಯೋಜನೆಯ ಮೂಲಕ ಕರೆತರಲಾದ 560 ವಿದ್ಯಾರ್ಥಿಗಳು ಸೇರಿದಂತೆ ದಿನಾಂಕ:09.03.2022ರವರೆಗೆ ಒಟ್ಟು 621 ಕರ್ನಾಟಕದ ವಿದ್ಯಾರ್ಥಿಗಳು/ಜನರನ್ನು ಸುರಕ್ಷಿತವಾಗಿ ಕರೆತರಲಾಗಿದೆ. ಪ್ರಸ್ತುತ ವೆಬ್‌ಪೋರ್ಟಲ್/ಮೊಬೈಲ್ ಅಪ್ಲಿಕೇಷನ್‌ನಲ್ಲಿ ಜನ ಸಮುದಾಯದಿಂದ ದಾಖಲಾಗಿರುವ ಮಾಹಿತಿಯಂತೆ 52 ಜನರನ್ನು ಕರೆತರುವುದು ಬಾಕಿ ಇರುತ್ತದೆ. ಬಾಕಿ ಉಳಿದ ವಿದ್ಯಾರ್ಥಿಗಳನ್ನು ಕರೆತರುವ ಕಾರ್ಯ ಚಾಲನೆಯಲ್ಲಿದ್ದು, ಭಾರತದ ರಾಯಭಾರ ಕಚೇರಿಯು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸುವಂತೆ ಯುದ್ಧ ಪೀಡಿತ ಪ್ರದೇಶದಲ್ಲಿ ಸಿಲುಕಿದವರಿಗೆ ತಿಳಿಸಲಾಗಿದೆ. ವೆಬ್ ಪೋರ್ಟಲ್‌ನಲ್ಲಿ ನಿಖರ ಮಾಹಿತಿ ನೀಡಿದ ಪ್ರತಿಯೊಬ್ಬ ವಿದ್ಯಾರ್ಥಿಯ ಪೋಷಕರನ್ನು ರಾಜ್ಯ ಸರ್ಕಾರವು ದೂರವಾಣಿ ಮೂಲಕ ಹಾಗೂ ನೇರವಾಗಿ ಸಂಪರ್ಕಿಸಲಾಗಿದೆ ಮತ್ತು ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವ ಎಲ್ಲಾ ಕ್ರಮಗಳನ್ನು ರಾಜ್ಯ ಸರ್ಕಾರದಿಂದ ಕೈಗೊಳ್ಳಲಾಗುತ್ತಿದೆ ಎಂಬ ಆತ್ಮಸ್ಥೈರ್ಯವನ್ನು ಅವರ ಪೋಷಕರಲ್ಲಿ ತುಂಬುವ ಕಾರ್ಯವನ್ನು ಮಾಡಲಾಗಿದೆ.

(ಒಳಾಡಳಿತ ಇಲಾಖೆಯಿಂದ ವರ್ಗಾವಣೆಗೊಂಡಿದೆ)

ಕಂಇ 105 ಟಿಎನ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು